ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಂದಮೇಲೆ ಅಲ್ಲ ಪಾನನಿರೋಧದ ಜಾರಿಗೆ ಬಂದಹಾಗಾಯಿತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಅಂಸೆಂಬ್ಲಿಯಲ್ಲೇ ಅಂಗೀಕಾರವಾಗಿರುವ ಒಂದು ಆಕ್ಟು ಜಾರಿಯಲ್ಲಿದೆ. ಅದಕ್ಕನುಸಾರವಾಗಿ ಕೊಡಬೇಕು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅದನ್ನು ಬದಲಾಯಿಸುವುದಕ್ಕೆ ಸರ್ಕಾರಕ್ಕೆ ಅಥವಾ ಈ ಸಭೆಗೆ ಅಧಿಕಾರವಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಸಭೆಗೆ ಅಧಿಕಾರವಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಂದಮೇಲೆ ಈ ವರ್ಷ ಕಡೂರು ತಾಲ್ಲೂಕಿನಲ್ಲ ಪಾನನಿರೋಧವು ಜಾರಿಯಲ್ಲಿರುವುದರಿಂದ ಅಲ್ಲಿಂದ ತರುವುದಕ್ಕೆ ಅವಕಾಶ ಕೊಡದೆ ಬೇರೆ ಕಡೆ ಅವಕಾಶ ಕೊಡಲು ಏರ್ಪಾಡು ಮಾಡುವುದು ಸೂಕ್ತವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ವಿಚಾರ ಸಂಬಂಧಪಟ್ಟ ಆಕ್ಟಿನಲ್ಲಿ ಸ್ಪಷ್ಟವಾಗಿದೆ.

Sri H. C. LINGA REDDY (Kolar District—General).—Sir, is it true that these date grove lands are more fertile and hence very valuable?

Mr. SPEAKER.—This question has been answered.

Sri H. C. LINGA REDDY.—I want to know whether you dispose of these lands by auction or by free grant?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಸಂದರ್ಭದ ಮೇಲೆ ಹೋಗುತ್ತದೆ. ಕೆಲವು ಕಡೆ ಪಬ್ಲಿಕ್ ಆಕ್ಷನ್ ಮೂಲಕ, ಕೆಲವು ಕಡೆ ಉಚಿತವಾಗಿ, ಮತ್ತೆ ಕೆಲವು ಕಡೆ ಅಸ್ಸೆಟ್ ಪ್ರೈಸ್ ಪ್ರಕಾರ ಕೊಡಲಾಗುತ್ತದೆ.

Sri H. C. LINGA REDDY.—Will the Government be pleased to consider the question of giving these lands to unemployed people ?

The Hon'ble Sri H. SIDDAIYA.—That also will be considered. In fact it is being given.

ಶ್ರೀ ಎಂ. ಎಕ್. ಜೋಯಿಸರು (ಮೈಸೂರು ಜಿಲ್ಲೆ).—ಕಡೂರಿನಲ್ಲ ಈಗ ಹೆಂಡಕ್ಕೆ ಮರಗಳನ್ನು ಕೊಡುತ್ತಿರುವುದನ್ನು ತಪ್ಪಿಸಲು ಕಾನೂನನ್ನು ಈಗಲಾದರೂ ಸರಿಪಡಿಸಲು ಯೋಚನೆಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಕ್. ಜೋಯಿಸರು.—ಚಿಕ್ಕಮಗಳೂರು ಜಿಲ್ಲೆಯಲ್ಲ ಈಚಲು ವನವನ್ನು ಸಾಗಿಗೆ ಕೊಡಲು ಇನ್ನೂ ರಿಕಾರ್ಡ್ work up ಆಗಿಲ್ಲವೆಂದು ಹೇಳಿದಿರಿ. ಅದು ಆಗುವುದಕ್ಕೆ ಎಷ್ಟು ದಿವಸ ಬೇಕು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಷ್ಟು ಬೇಗ ಆಗುವ ನಿರೀಕ್ಷೆಯಿದೆ.

ಶ್ರೀ ಎಂ. ಎಕ್. ಜೋಯಿಸರು.—ಎಷ್ಟು ವರ್ಷ ಅಥವಾ ತಿಂಗಳು ಬೇಕೆಂದು ಹೇಳಲು ಸಾಧ್ಯವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ರೀತಿ ಹೇಳುವುದಕ್ಕಾಗುವುದಿಲ್ಲ. ಅಂತೂ ವರ್ಷಗಟ್ಟಲೆ ಆಗುವುದಿಲ್ಲ.

ಶ್ರೀ ಎಂ. ಎಕ್. ಜೋಯಿಸರು.—ರಿಕಾರ್ಡ್ ಬಂದಾಗಲಾದರೂ ಆಕ್ಟನ್ನು ಬದಲಾಯಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡಲಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ)—ಡ್ರೈ ಏರಿಯಾದಲ್ಲ ಕೊಡುವಹಾಗೆ ವೆಟ್ ಏರಿಯಾದಲ್ಲೂ ಕೊಡುವ ನೀತಿಯಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ವ್ಯತ್ಯಾಸವಿಲ್ಲವೆಂದು ಕಾಣುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲ ಈಚಲು ವನವನ್ನು ಸಾಗಿಗೆ ಕೊಟ್ಟಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮರಗಳು ಹೆಚ್ಚಾಗಿಲ್ಲದೆ ಮತ್ತು ಪ್ರಯೋಜನಕ್ಕೆ ಬಾರದೆ ಇರುವ ಸ್ಥಳದಲ್ಲಿ ಎಕ್ಸೈಜ್ ಇಲಾಖೆಯ ಅಭಿಪ್ರಾಯ ಪಡೆದು ವಿಲೇವಾರಿ ಮಾಡುತ್ತಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗೆ ಅಭಿಪ್ರಾಯ ಪಡೆಯದೆ ಸಾಗಿಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲ ಎಂಬುದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 100 ಎಕರೆಯನ್ನು ಪ್ರಭಾವಶಾಲಿಗಳಿಗೆ ಸಾಗಿಗೆ ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಖಚಿತವಾಗಿ ಹೇಳಿದರೆ ಅದನ್ನು ವಿಚಾರಮಾಡಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಚಲು ಮರಗಳು ಚೆನ್ನಾಗಿರುವಕಡೆ ಸಾಗಿಗೆ ಕೊಡುವುದನ್ನು ತಪ್ಪಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮರಗಳು ಹೆಚ್ಚಾಗಿರುವ ಕಡೆ ವೆಟ್ ಜಿಲ್ಲೆಗಳಲ್ಲ ಸಾಮಾನ್ಯವಾಗಿ ಕೊಡುವುದಿಲ್ಲ.

Mr SPEAKER.—Next Question No. 145, Sri W. H. Hanumanthappa. The Hon'ble Member is not present. It will be treated as unstarred. Next question No. 23. Sri M. Govinda Reddy.

Irrigation Works and Water Rate.

*ಪ್ರಶ್ನೆ. 23.—ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(i) ಸಂಸ್ಥಾನದ ಸರ್ಕಾರದವರು ನೀರಾವರಿ ಯೋಜನೆಗಳನ್ನು ಪ್ರಾರಂಭಿಸುವುದಕ್ಕೆ ;

(ii) ಈಗಿರತಕ್ಕ ನೀರಾವರಿ ಕಾಮಗಾರಿಗಳಿಂದ ರೈತರುಗಳಿಗೆ ನೀರನ್ನು ಹಂಚುವುದಕ್ಕೆ ;

(iii) ಹೊಸದಾಗಿ ನೀರು ಸರದಿ ತೆರಿಗೆಯನ್ನು ವಿಧಿಸುವುದಕ್ಕೆ ಅಥವಾ ಈಗಿರತಕ್ಕ ನೀರು ಸರದಿ ತೆರಿಗೆಯನ್ನು ಬದಲಾವಣೆಮಾಡುವುದಕ್ಕೆ ;

ಇಂಡಿಯಾ ಸರ್ಕಾರದವರ ಅನುಮೋದನವು ಅವಶ್ಯಕವೆ ?

ಉತ್ತರ. ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(i) ಇಲ್ಲ.
(ii) ಇಲ್ಲ.
(iii) ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇರಿಗೇಷನ್ ವರ್ಕ್ಸ್ ಪ್ರಾರಂಭಿಸಬೇಕಾದರೆ ಅನುಮತಿ ಪಡೆಯಬೇಕಾಗಿಲ್ಲವೆಂದು ಹೇಳಿದ್ದೀರಿ. ಕ್ಯಾಪಿಟಲ್ ವರ್ಕ್ಸ್ ಹೊಸದಾಗಿ ಮಾಡುವುದಕ್ಕೆ ಇಂಡಿಯಾ ಸರ್ಕಾರದ ಅಪ್ಪಣೆ ಪಡೆಯಬೇಡವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕ್ಯಾಪಿಟಲ್ ವರ್ಕ್ಸ್ ಶುರುಮಾಡಬೇಕಾದರೆ ಇಂಡಿಯಾ ಸರ್ಕಾರಕ್ಕೆ ಪ್ಲಾನ್ ವಗೈರೆ ಕಳುಹಿಸಿ ಅವರ ಅಭಿಪ್ರಾಯ ಪಡೆಯಬೇಕಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸಲಹೆಯನ್ನೂ ಕೇಳಬೇಕಾಗಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

Bad Condition of Roads under Public Works Management.

* ಪ್ರಶ್ನೆ 45.—ಶ್ರೀ ಎಚ್. ಸಿದ್ದನಂಜಪ್ಪನವರು (ಹಾಸನ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಪಬ್ಲಿಕ್ ವರ್ಕ್ಸ್ ಇಲಾಖೆಯ ರಸ್ತೆಗಳು, ಅದರಲ್ಲೂ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಬೆಂಗಳೂರು, ಮಂಗಳೂರು ರಸ್ತೆಯು, ಬಹಳಮಟ್ಟಿಗೆ ಕೆಟ್ಟುಹೋಗಿರುವ ಸಂಗತಿಯು ಸರ್ಕಾರದವರ ಗಮನಕ್ಕೆ ಬಂದಿದೆಯೆ :

(b) ಆ ರಸ್ತೆಗಳು ಅಷ್ಟು ಕೆಟ್ಟಿರಲು ಕಾರಣವೇನು; ಅವು ಎಂದಿನಿಂದ ಈ ಸ್ಥಿತಿಯಲ್ಲಿವೆ ;

(c) ಆ ರಸ್ತೆಗಳನ್ನು ಚೆನ್ನಾಗಿ ದುರಸ್ತುಮಾಡಿ ಅವುಗಳನ್ನು ಸರಿಯಾದ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲು ಜರುಗಿಸಬೇಕೆಂದಿರುವ ಕಾರ್ಯಕ್ರಮವೇನು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಆ ರಸ್ತೆಗಳಿಗಾಗಿ ವರ್ಷೇ ವರ್ಷೇ ದುರಸ್ತಿಗಳಿಗೆ ಮತ್ತು ವಿಶೇಷರೀತಿಯ ದುರಸ್ತಿಗಳಿಗೆ ಮಂಜೂರ್ಮಾಡುವ ಗ್ರಾಂಟುಗಳಿಗನುಸಾರವಾಗಿ, ಸಾಧ್ಯವಾದಮಟ್ಟಿಗೂ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡುಬರಲಾಗುತ್ತಿದೆ.

(b) ಕಳೆದ ಮೂರು ವರ್ಷಗಳಿಂದಲೂ ಸಂಚಾರವು ವಿಪರೀತವಾಗಿ ಹೆಚ್ಚಿನುವುದರಿಂದ ಆ ರಸ್ತೆಯು ಏಕಪ್ರಕಾರವಾಗಿ ನಾದುರಸ್ತಾಗುತ್ತಿದೆ.

(c) ರಸ್ತೆಗಳ ಪುನರ್ವಿಂಗಡನೆಗೆ ಏರ್ಪಟ್ಟಿರುವ ನಮಿತಿಯವರ ಸಲಹೆಗಳ ಮೇರೆಗೆ ನಂಸ್ಥಾನದಲ್ಲಿರುವ ನಾನಾ ತರಗತಿಗಳ ರಸ್ತೆಗಳ ನಂಬಂಧದಲ್ಲಿ ವರ್ಷೇ ವರ್ಷೇ ದುರಸ್ತಿಗಳಿಗಾಗಿ ಮೈಲೇಜು ಗ್ರಾಂಟನ್ನು ಹೆಚ್ಚಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ.

'ಸ್ಪೇಟ್‌ಫಂಡ್' ರಸ್ತೆಗಳಿಗೆ ಕಲ್ಲುರಗು ಹಾಕಿಸಿ ಜಲ್ಲಿ ಕಾಮಗಾರಿ ಮಾಡಿಸುವ ಕಾರ್ಯಕ್ರಮವೂ ಕೂಡ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ರಸ್ತೆಗಳ ದುರಸ್ತಿಗೆ ಏನು ಏರ್ಪಾಡು ಮಾಡಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ ಹೆಚ್ಚು ಗ್ರಾಂಟು ಕೊಟ್ಟಿದೆ. ಸಾಧ್ಯವಾದಷ್ಟು ಉತ್ತಮಪಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ಯಾವಾಗ ರಿಪೇರಿ ಪ್ರಾರಂಭಿಸುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗತಾನೆ ಬಡ್ಜೆಟ್ ಮಂಜೂರು ಮಾಡಿದ್ದೀರಿ. ಇನ್ನು ಮೇಲೆ ಪೆಟಲ್ ಶೇಖರಿಸುವುದಕ್ಕೆ ಅಸೆಂಬ್ಲಿಯಾದ ಮೇಲೆ ತಿಳಿವಳಿಕೆ ಕೊಡುತ್ತೇವೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—(b) ಪ್ರಶ್ನೆಗೆ ಉತ್ತರವಾಗಿ 'due to heavy increase in traffic the road is subjected to constant wear and tear for the last three years' ಎಂದು ಹೇಳಿದೆ. ಸಂಚಾರವು ಈ ಮೂರು ವರ್ಷಗಳಲ್ಲಿ ವಿಪರೀತವಾಗಿ ಹೆಚ್ಚಿ ರಸ್ತೆಯು ತೀರ ಕೆಡಲು ಕಾರಣವೇನು ?

The Hon'ble Sri T. MARIAPPA.—For the last three years the number of vehicles has increased and in fact we have not been able to allot more money for special repairs. Therefore a bad road has become worse.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಾಗಿ ಅರ್ಥವಾಗುತ್ತಿಲ್ಲವೆಂದು ಪುನಃ ಕೇಳಬೇಕಾಗಿದೆ. ಸಂಚಾರ ಅಷ್ಟು ಹೆಚ್ಚಲು ಕಾರಣವೇನು ?

The Hon'ble Sri T. MARIAPPA.—ಬಾಕಿ ರಸ್ತೆಗಳೂ ಕೂಡ ಕೆಟ್ಟಿವೆ. ಹೋದಸಲ ಚರ್ಚೆಯಾದಾಗ ವಿಚಾರ ಹೇಳಿದೆ. We were not able to provide more money for special repairs.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—(c) ಪ್ರಶ್ನೆಗೆ ಉತ್ತರವಾಗಿ ವರ್ಷೇ ವರ್ಷೇ ದುರಸ್ತಿಗಾಗಿ ಮೈಲೇಜು ಗ್ರಾಂಟು ಕೊಡಬೇಕೆಂದಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರಸ್ತೆಗಳ ಪುನರ್ವಿಂಗಡನೆಗೆ ಏರ್ಪಟ್ಟಿರುವ ಸಮಿತಿಯವರ ಸಲಹೆ ಪ್ರಕಾರ ಎಲ್ಲವನ್ನೂ ಪರಿಶೀಲಿಸಿದೆ. ನಾಲ್ಕು ತರಹ ರಸ್ತೆಗಳನ್ನು ವಿಂಗಡಿಸಬೇಕೆಂದಿದೆ, ಮೊದಲನೆಯ ದರ್ಜೆ ರಸ್ತೆಗೆ 750 ರೂಪಾಯಿ, ಎರಡನೆಯ ದರ್ಜೆಗೆ 500 ರೂಪಾಯಿ, ಮೂರನೆಯ ದರ್ಜೆಗೆ 200 ರಿಂದ 400 ರೂಪಾಯಿ, ನಾಲ್ಕನೆಯ ದರ್ಜೆಗೆ ಮಿನಿಮಂ 100 ರೂಪಾಯಿ ಇರಬೇಕೆಂದು ಮಾಡಿದೆ. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಮತ್ತು ಸರ್ಕಾರದವರು ಇದಕ್ಕೆ ಹಣ ಕೊಡಬೇಕು. ಇದಕ್ಕೆ 15 ಲಕ್ಷ ಚಿಲ್ಲರೆ